ಕರ್ನಾಟಕ ಸರ್ಕಾರ

**ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಜಿಲ್ಲಾ ಪಂಚಾಯತ್ ಉಡುಪಿ**

---

ಅಕ್ಟೋಬರ್ 3ರಿಂದ 10ರ ವರೆಗೆ 8ನೇ ತರಗತಿ ವಿದ್ಯಾರ್ಥಿಗಳಿಗೆ "ಪೂರಕ ಬೋಧನಾ ಸಪ್ತಾಹ" ನಡೆಸುವ ಬಗ್ಗೆ.

8ನೆಯ ತರಗತಿಯ ವಿದ್ಯಾರ್ಥಿಗಳಲ್ಲಿ ಇರುವ ಕಲಿಕಾ ಅಂತರ ಮತ್ತು ತಪ್ಪು ಕಲಿಕೆಗಳನ್ನು ಹೋಗಲಾಡಿಸಿ ಅವರನ್ನು ಮುಂದಿನ ಕಲಿಕೆಗೆ ಸಿದ್ಧಗೊಳಿಸುವ "ಪೂರಕ ಬೋಧನಾ ಸಪ್ತಾಹವು" ಅಕ್ಟೋಬರ್ 3ರಿಂದ 10ರವರೆಗೆ ಜಿಲ್ಲೆಯ ಎಲ್ಲ ಸರಕಾರಿ ಹಾಗೂ ಅನುದಾನಿತ ಪ್ರೌಢ ಶಾಲೆಗಳಲ್ಲಿ ಜಿಲ್ಲೆಯಾದ್ಯಂತ ನಡೆಯಲಿದೆ. ಅದಕ್ಕಾಗಿ ಪ್ರತಿ ವಿಷಯದಲ್ಲಿ ಕಲಿಕಾ ಮಾಡ್ಯುಲ್ ಅನ್ನು ನುರಿತ ಅಧ್ಯಾಪಕರಿಂದ ಸಿದ್ಧ ಪಡಿಸಿ ಇಲಾಖಾ ವೆಬ್‌ಸೈಟ್ www.ddpiudupi.in ನಲ್ಲಿ ಪ್ರಕಟಿಸಲಾಗಿದೆ.ಈ ಮಾಡ್ಯುಲ್‌ಗಳ ಆಧಾರದ ಮೇಲೆ ಶಿಕ್ಷಕರು ಕಲಿಕಾಂಶ ಸಾಮರ್ಥ್ಯವನ್ನು ಸಮರ್ಥವಾಗಿ ಸಾಧಿಸಲು ಉಪಯುಕ್ತವಾಗುವಂತೆ ಚಟುವಟಿಕೆಗಳನ್ನು ರೂಪಿಸುವುದು.ಸಪ್ತಾಹದ ಅಂತ್ಯದಲ್ಲಿ ಸರಳವಾದ ಮೌಲ್ಯಮಾಪನ ಸಾಧನ ಸಿದ್ಧಪಡಿಸಿದ್ದು ಇದು ವಿದ್ಯಾರ್ಥಿಗಳ ಸಾಧನೆಯನ್ನು ಅಳೆಯಲಿದೆ ಮತ್ತು ಮುಂದಿನ ಹಂತದಲ್ಲಿ ಪೂರಕ ಬೋಧನೆ ಅಗತ್ಯವಿರುವ ವಿದ್ಯಾರ್ಥಿಗಳನ್ನು ಗುರುತಿಸಲು ಸಹಾಯಕವಾಗಲಿದೆ. ಶಿಕ್ಷಕರಿಗೆ ಉಂಟಾಗುವ ತೊಂದರೆಗಳನ್ನು ಪರಿಹರಿಸಲು ಅಧಿಕಾರಿಗಳ ತಂಡ ಪ್ರತಿ ಶಾಲೆಗಳಿಗೆ ಭೇಟಿ ನೀಡಲಿದ್ದಾರೆ. ಈ ಮಾಡ್ಯುಲ್‌ನ್ನು ಜಿಲ್ಲೆಯ ನುರಿತ ಅಧ್ಯಾಪಕರು ಸರ್ವಶಿಕ್ಷಣ ಅಭಿಯಾನದ ನಿರ್ದೇಶಕರಾದ ಶ್ರೀ ಮಲ್ಲಣ್ಣರವರ ಮಾರ್ಗದರ್ಶನದಲ್ಲಿ ಸಿದ್ಧ ಪಡಿಸಿರುತ್ತಾರೆ.ಜಿಲ್ಲೆಯ ಎಲ್ಲ ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಲ್ಲಿ ಪೂರಕ ಬೋಧನಾ ಸಪ್ತಾಹ ನಡೆಸಿ,ಬೋಧನಾ ಅವಧಿಯ ವರದಿಯನ್ನು ಈ ಕಛೇರಿಗೆ ಸಲ್ಲಿಸುವುದು ಹಾಗೂ ಈ ಅವಧಿಯಲ್ಲಿ 9-10ನೇ ತರಗತಿಯ ಮಕ್ಕಳಿಗೆ ಮುಂದಿನ ಸೆಮಿಸ್ಟರ್‌ನ ಪಾಠ ಬೋಧನೆ ಮುಂದುವರೆಸುವಂತೆ ಶಾಲಾ ಮುಖ್ಯಸ್ಥರಿಗೆ ತಿಳಿಸಿದೆ.

(ಎಚ್.ದಿವಾಕರ ಶೆಟ್ಟಿ)
ಉಪನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ
ಉಡುಪಿ(ಜಿಲ್ಲೆ)

E:\2015-16\Letters of 2015-16\C.A.O-15-16.doc